**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಚನ್ನರಾಯಪಟ್ಟಣ**

**ಸಿಸಿ ಸಂಖ್ಯೆ** 289/2013 **CW**-2 **PW**-2

**ಸಾಕ್ಷಿಯನ್ನು ದಿಃ 03.03.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಹೆಸರುಃ | ಲಲಿತ |
| ಗಂಡನ ಹೆಸರುಃ | ಮಲ್ಲೇಶ |
| ವಯಸ್ಸುಃ | 61 ವರ್ಷ |
| ವೃತ್ತಿಃ | ಗೃಹಿಣಿ |
| ವಾಸ ಸ್ಥಳಃ | ಜನಿವಾರ ಗ್ರಾಮ |

**ಮುಖ್ಯವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ಚಾಸಾ-1 ನನ್ನ ಗಂಡ ಚಾಸಾ-3 ನನ್ನ ಮಗಳು, ಚಾಸಾ-4 ನನ್ನ ಮಗ. ಚಾಸಾ-5 ರಿಂದ 8 ಗೊತ್ತು. ಆರೋಪಿ ನನ್ನ ಭಾವ.

ನಮ್ಮ ಮತ್ತು ಅರೋಪಿಯ ನಡುವೆ ಆಸ್ತಿ ವಿಚಾರವಾಗಿ ದ್ವೇಷ ಇತ್ತು. ನಾವು ನಮ್ಮ ಮನೆಯಲ್ಲಿ ಅಂಗಡಿ ಇಟ್ಟುಕೊಂಡಿದ್ದೇವೆ. ದಿಃ 06.11.2012 ರಂದು ಬೆಳಗ್ಗೆ 9.00 ಗಂಟೆ ಸಮಯದಲ್ಲಿ ಚಾಸಾ-1 ರವರು ಅಂಗಡಿಯಲ್ಲಿದ್ದು ನಾನು ಮತ್ತು ಚಾಸಾ-3 ರವರು ಮನೆಯ ಒಳಗೆ ಇದ್ದೆವು. ಪಕ್ಕದ ಮನೆಯ ಹುಡುಗ ಬಾಲನ್ನು ನಮ್ಮ ಮನೆಯ ಮೇಲೆ ಎಸೆಯುತ್ತಿದ್ದ. ಪದೇ ಪದೇ ಅದೇ ರೀತಿ ಮಾಡುತ್ತಿದ್ದರಿಂದ ಅವರ ತಂದೆಯನ್ನು ಕರೆದುಕೊಂಡು ಬರುವಂತೆ ಚಾಸಾ-1 ರವರು ತಿಳಿಸಿದ್ದರು. ಅಷ್ಟರಲ್ಲಿ ಆರೋಪಿ ಅಲ್ಲಿಗೆ ಬಂದು ಚಾಸಾ-1 ರವರಿಗೆ ಅವಾಚ್ಯ ಶಬ್ದಗಳಿಂದ ಬೈದು ಗಲಾಟೆ ಮಾಡುತ್ತಿದ್ದು ಶಬ್ದ ಕೇಳಿಸಿಕೊಂಡು ನಾನು ಮತ್ತು ಚಾಸಾ-3 ರವರು ಅಲ್ಲಿಗೆ ಬರುವಷ್ಟರಲ್ಲಿ ಆರೋಪಿ ತನ್ನ ಕೈಯಲ್ಲಿದ್ದ ಚಾಕುವಿನಿಂದ ಚಾಸಾ-1 ರವರ ಎಡಹೊಟ್ಟೆಗೆ ತಿವಿದಿರುತ್ತಾರೆ. ನಾನು, ಚಾಸಾ-3 ರವರು ಬಿಡಿಸಲು ಹೋದಾಗ ನನ್ನ ಎಡಕೆನ್ನೆಗೆ ಮತ್ತು ಚಾಸಾ-3 ರವರ ಎಡರಟ್ಟೆಗೆ ಚಾಕುವಿನಿಂದ ಚುಚ್ಚಿರುತ್ತಾರೆ.

ನಂತರ ಚಾಸಾ-4 ರಿಂದ ಚಾಸಾ-7 ರವರು ನಮ್ಮನ್ನು ಚನ್ನರಾಯಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಕರೆದುಕೊಂಡು ಬಂದಿರುತ್ತಾರೆ. ಹೆಚ್ಚಿನ ಚಿಕಿತ್ಸೆಗೆ ಹಾಸನದ ಎಸ್ ಎಂ ಎಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ. ದಿಃ 09.11.2012 ರಂದು ಚಾಸಾ-1 ರವರಿಂದ ಹೇಳಿಕೆ ದೂರನ್ನು ಪೋಲೀಸರು ಪಡೆದಿರುತ್ತಾರೆ. ಈ ಸಂಬಂಧ ನಾನು ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಮು ಮಾ-1ನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

(ಆರೋಪಿ ಗೈರು ಹಾಜರಿದ್ದು ಆರೋಪಿ ಪರ ವಕೀಲರು ಆರೋಪಿಯನ್ನು ಗುರುತಿಸುವ ಬಗ್ಗೆ ತಕರಾರು ಇಲ್ಲ ಎಂದು ನಿವೇದಿಸಿಕೊಂಡಿರುತ್ತಾರೆ).

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಮ್ ಎಸ್ ಡಿ ರವರಿಂದ ಃ**

ನಮ್ಮ ಮತ್ತು ಆರೋಪಿ ನಡುವೆ ಸುಮಾರು 40 ವರ್ಷಗಳಿಂದ ದ್ವೇಷ ಇದೆ. ಪಾಲು ಪಟ್ಟಿಯ ದಿನಾಂಕ ನೆನಪಿಲ್ಲ. ಆ ಸಮಯದಲ್ಲಿ ಆರೋಪಿಗೂ ಗಾಯವಾಗಿ ಆಸ್ಪತ್ರೆಯಲ್ಲಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿ ಸುಮಾರು 30 ವರ್ಷಗಳ ಹಿಂದೆ ನಮ್ಮ ವಿರುದ್ಧ ದೂರು ನೀಡಿದ್ದರು ಎಂದರೆ ಸರಿಯಲ್ಲ. ಆರೋಪಿ ಮತ್ತು ನಮ್ಮ ಮನೆ ಅಕ್ಕ ಪಕ್ಕ ಎಂದರೆ ಸರಿ. ನಮ್ಮ ಮನೆಯ ಗೋಡೆ ವಿಚಾರವಾಗಿ ಸಿವಿಲ್ ದಾವೆ ವಿಚಾರಣೆಯಲ್ಲಿದೆ ಎಂದರೆ ಸರಿ. ನಮ್ಮ ಮನೆಯ ರಿಪೇರಿ ಮಾಡಿದ ದಿನಾಂಕ ಗೊತ್ತಿಲ್ಲ. ನಮ್ಮ ಮನೆಯ ಮುಂದಿನ ರಸ್ತೆಯಲ್ಲಿ ಹೆಚ್ಚಿನ ಜನ ಓಡಾಡುತ್ತಾರೆ ಎಂದರೆ ಸರಿ.ಗಲಾಟೆ ಸಮಯದಲ್ಲಿ ಹೆಚ್ಚು ಜನ ಸೇರಿದ್ದರು ಎಂದರೆ ಸರಿ. ಸುಮಾರು 10-15 ಜನ ಸೇರಿದ್ದರು. ಅವರುಗಳ ಹೆಸರು ಹೇಳಲಾಗುವುದಿಲ್ಲ. ಗಲಾಟೆ ನಡೆಯುವ ಸಮಯದಲ್ಲಿ ನಾನು ಮನೆಯ ಒಳಗೆ ಇದ್ದೆ ಎಂದರೆ ಸರಿ. ನಾನು ಬಂದಾಗ ಆರೋಪಿ ಚಾಸಾ-1 ರವರನ್ನು ಬೈಯುತ್ತಿದ್ದರು. ಸರ್ಕಾರಿ ಆಸ್ಪತ್ರಗೆ ಸ್ಕೂಲ್ ವ್ಯಾನ್ ನಲ್ಲಿ ಬಂದಿರುತ್ತೇವೆ. ಗಲಾಟೆಯಲ್ಲಿ ನಮ್ಮ ಬಟ್ಟೆಯೂ ಸಹ ರಕ್ತ ಕಲೆಗಳಾಗಿರುತ್ತದೆ.

ಪೋಲೀಸರಿಗೆ ಸದರಿ ಬಟ್ಟೆಗಳನ್ನು ನೀಡಿರುವುದಿಲ್ಲ. ಮು ಮಾ–1 ರ ರೀತಿಯ ಚಾಕು ಎಲ್ಲಾ ಕಡೆ ದೊರೆಯುತ್ತದೆ ಎಂದರೆ ಸರಿ. ಮು ಮಾ–1 ರಿಂದಲೇ ತಿವಿದಿರುತ್ತಾರೆ ಎಂದು ತೋರಿಸಲು ಯಾವುದೇ ವಿಶೇಷ ಗುರುತನ್ನು ಇಟ್ಟಿಲ್ಲ ಎಂದರೆ ಸರಿ. ನಮ್ಮ ಮತತು ಆರೋಪಿಯ ನಡುವೆ ಮೊದಲಿನಿಂದಲೂ ದ್ವೇಷ ಇರುವುದರಿಂದ ಚಾಸಾ–1 ರವರು ಸುಳ್ಳು ದೂರು ನೀಡಿದ್ದು ನಾನು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವೇ ಆರೋಪಿಗೆ ತೊಂದರೆ ನೀಡುತ್ತಿದ್ದೇವೆ ಎಂದರೆ ಸರಿಯಲ್ಲ. ಆರೋಪಿ ನಮ್ಮ ವಿರುದ್ದ ದೂರನ್ನು ನೀಡಿದ್ದರಿಂದ ಅದರ ಪ್ರತೀಕಾರವಾಗಿ ಚಾಸಾ–1 ರವರು ಈ ದೂರನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ಆ ದಿನ ಯಾವುದೇ ಗಲಾಟೆ ಆಗಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಘಟನೆ ನಡೆದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ).**

**ಓ ಹೇ ಕೇ ಸರಿ ಇದೆ.**

**(ಕುಸುಮ ವಿ .)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**